ಗಮನಿಸಿದ್ದೆ. ನಂಬಿ ಬಿಡಿ, ಆತ ಐದು ದಿನದ ವಾರದಲ್ಲಿ ನಾಲ್ಕು ದಿನವಾದರೂ (ತುಸು ಬೇರೆ ಬೇರೆ ಛಾಯೆಯ) ಕೆಂಪು ಟಿ ಶರ್ಟಿನಲ್ಲಿ ರಾರಾಜಿಸುತ್ತಿದ್ದಿದ್ದ. ಹೀಗಾಗಿ ನನ್ನ ಹಣೆಯ ಮೇಲೆ ಕೆಂಪು ಬಣ್ಣದ ಬಿಂದಿ ಕಾಣದಿದ್ದಾಗ ಬಹುಶಃ ಅದು ತಟ್ಟನೆ ಅವನ ಗಮನಕ್ಕೆ ಬರುತ್ತಿರಬಹುದು ಎಂದುಕೊಂಡೆ. ಇನ್ನೊಮ್ಮೆ ಅವನು ಹಾಗೆ ಹೇಳುವಾಗ ಅಪರೂಪಕ್ಕೆ ಬೇಗನೆ ಬಂದಿದ್ದ ಇನ್ನೊಬ್ಬಳು (ಎಂದೂ ಕುಂಕುಮ ಇಡದ, ಆಧುನಿಕ ಎನ್ನಿ ಬೇಕಿದ್ದರೆ) ಹಿರಿಯ ಸಹೋದ್ಯೋಗಿ ಇದ್ದಳು. ಆಕೆ ಅಚ್ಚರಿಯಿಂದ, "ವಾಟ್... ಯೂ ಆಲ್ಸೋ..." ವಾಕ್ಯ ಮುಗಿಸದೇ, ನೀನು ಕೂಡ ಹೀಗೆ ಹೇಳುವುದೇ ಎಂಬರ್ಥದಲ್ಲಿ ತಲೆ ಕೊಡವುತ್ತ ಅವನನ್ನು ನೋಡಿದಳು. ಅವನಿಗೆ ತಟ್ಟನೆ ಅರಿವಾಯಿತು ಕಾಣುತ್ತೆ, "ಹೇ... ಇಟ್ಸ್ ನಥಿಂಗ್ ಟು ಡು ವಿತ್ ದಿ ಟ್ರೆಡಿಶನ್, ಆರ್ ಈವನ್ ವಿತ್ ದಿ ಫೆಮಿನಿಸ್ಟ್ ಥಾಟ್... ಫಾರ್ ಮಿ ಇಟ್ಸ್ ಜಸ್ಟ್ ಎ ಪ್ಯಾಟ್ರನ್. ಐ ಸೀ ಸುಮಾ'ಸ್ ಫೇಸ್ ಇನ್ ಎ ಪರ್ಟಿಕ್ಯುಲರ್ ಪ್ಯಾಟ್ರನ್. ಅಂಡ್ ಐ ರೆಕೊಗ್ನೈಸ್ ಎನಿ ಚೇಂಜ್ ಇನ್ ದಟ್ ಪ್ಯಾಟ್ರನ್. ದಟ್ಸ್ ಆಲ್... ಯು ನೋ... ದೀಸ್ ಆರ್ ಆಲ್ ಪ್ಯಾಟ್ರನ್ಸ್..." ಎನ್ನುತ್ತ ಕುರುಚಲು ಗಡ್ಡ ಸವರುತ್ತ, ಭುಜ ಕುಣಿಸಿ, ಮುಗ್ಧ ನಗು ಬೀರಿ ತನ್ನ ಎಂದಿನ ಫಿಲಾಸಫರ್ ಲುಕ್ ಕೊಟ್ಟ. ಹೌದಲ್ಲ ಎನ್ನಿಸಿತ್ತು.

ನಿಜ, ನನ್ನ ಮಟ್ಟಿಗೆ ಕುಂಕುಮ ಸದ್ಯದ ಬದುಕಿನ ಒಂದು ವಿನ್ಯಾಸ ಮಾತ್ರ... ನಾನು ಪ್ರತೀದಿನ ಬಟ್ಟೆ ಧರಿಸುವಷ್ಟೇ ಸಹಜವಾಗಿ ಹಣೆಗೆ ಇಡುತ್ತೇನೆ. ವ್ಯತ್ಯಾಸವಿಷ್ಟೆ, ಎಷ್ಟೇ ಅವಸರದಲ್ಲಿಯೂ ಬಟ್ಟೆ ಹಾಕುವುದು (ಪುಣ್ಯಕ್ಕೆ!) ಮರೆಯುವುದಿಲ್ಲ, ಆದರೆ ಹಣೆಗಿಡುವುದನ್ನು ಆಗೀಗ ಮರೆಯಬಹುದು ಅಷ್ಟೇ. ಕುಂಕುಮಕ್ಕಿರುವ ಸಂಕೇತಗಳು ನನಗೆ ಈಗ ಅಪ್ರಸ್ತುತ. ಹೀಗಾಗಿ ನನಗೆ ಕುಂಕುಮ ಇಡುವುದು ಒಂದು ಐಡೆಂಟಿಟಿಯೂ ಅಲ್ಲ, ಸ್ತ್ರೀತ್ವಗೀತ್ವದ ಅಸ್ಮಿತೆಯೂ ಅಲ್ಲ ಅಥವಾ ಹಣೆಗಿಡುವುದನ್ನು ಬಿಡುವುದು ದೊಡ್ಡ ಕ್ರಾಂತಿಯೂ ಅಲ್ಲ. ಯಾರದೋ ಮನೆಗೆ ಹೋದಾಗ ನನಗೆ ಕುಂಕುಮ ಕೊಡಲಿಲ್ಲ ಎನ್ನುವುದು ಮನಸ್ಸಿನಿಂದ ಮರೆಯಾಗಿದೆ, ಆದರೆ ಹಾಗೆ ಪಿಚ್ಚೆನ್ನಿಸಿಕೊಂಡು ಕೂತ ಆ ಚಿತ್ರ ನನ್ನದಾಗಿಯೂ, ನನ್ನದಕ್ಕಿಂತ ಹೆಚ್ಚಾಗಿ, ಕುಂಕುಮದ ಸಂಕೇತಗಳ ಪ್ರಸ್ತುತತೆಯನ್ನು ಇನ್ನೂ ಉಳಿಸಿಕೊಂಡ ಅಸಂಖ್ಯಾತ ಹೆಣ್ಣುಮಕ್ಕಳ ಚಿತ್ರವಾಗಿ ನನ್ನೊಳಗೆ ತೂಗುತ್ತಿರುತ್ತದೆ.

## ಸುಮಂಗಲಾ

ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನವರು. ಕೆಲಕಾಲ ಉಪನ್ಯಾಸಕಿಯಾಗಿದ್ದರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸ ಮತ್ತು ಕೆಲಸ.

ಕತೆ, ಜೀವನಚರಿತ್ರೆ, ಲೇಖನಗಳು ಸೇರಿದಂತೆ ಬರವಣಿಗೆಯ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. 'ಸೀತಾಳೆ ಹೂ ಮತ್ತು ಇತರ ಕತೆಗಳು', 'ಜುಮುರು ಮಳೆ', 'ಕಾಲಿಟ್ಟಲ್ಲಿ ಕಾಲುದಾರಿ', 'ಹನ್ನೊಂದನೇ ಅಡ್ಡರಸ್ತೆ' ಅವರ ಕಥಾ ಸಂಗ್ರಹಗಳು. ಅವರು ಸಂಗೀತಗಾರ ಪಂ. ರಾಜೀವ್ ತಾರಾನಾಥ್ ಕುರಿತ ಪುಸ್ತಕ 'ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥ ಜೀವನ ರಾಗ' ಸಂಪಾದಿಸಿದ್ದಾರೆ.